ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ನೇವಿ-1/ಅಉಆ/315/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-01,
ದಿನಾಂಕ:03-01-2023

## ಸುತ್ತೋಲೆ

ವಿಷಯ: 2022-23ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ.

* * * * * * *

2022-23ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಯಂ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಕೆಯಾಗಿರುವ ಬೋಧನಾ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದ್ದು, ಅದರಂತೆ ಆಯ್ಕೆ ಸಂದರ್ಭದಲ್ಲಿ ಅತಿಥಿ ಉಪನ್ಯಾಸರು ಈ ಹಿಂದೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಲ್ಲಿಸಿದ ಸೇವಾ ಅವಧಿಯ ವಿವರಗಳ ನಿಖರ ಮಾಹಿತಿಯನ್ನು ಪಡೆಯುವುದು ಅತ್ಯಗತ್ಯವಾಗಿರುತ್ತದೆ. ಆದ್ದರಿಂದ ಈ ಹಿಂದೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಲ್ಲಿಸಿದ ಸೇವಾ ವಿವರಗಳ ನಿಖರ ಮಾಹಿತಿಯುಳ್ಳ ***'ಸೇವಾ ಪ್ರಮಾಣ ಪತ್ರ'*** ವನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಯಾವುದೇ ವಿಳಂಬವಿಲ್ಲದೆ ಅತಿಥಿ ಉಪನ್ಯಾಸಕರಿಗೆ ನೀಡುವಂತೆ ಸೂಚಿಸಲಾಗಿದೆ.

ಮುಂದುವರೆದು, 2022-23ನೇ ಸಾಲಿಗೆ ಅತಿಥಿ ಉಪನ್ಯಾಸರನ್ನು ಆಯ್ಕೆ ಮಾಡಿಕೊಳ್ಳಬೇಕಾಗಿರುವುದರಿಂದ ಕಾಲೇಜಿನಲ್ಲಿ ಲಭ್ಯವಿರುವ ಕಾರ್ಯಭಾರದ ವಿವರಗಳನ್ನು ಇ.ಎಂ.ಐ.ಎಸ್. ನಲ್ಲಿ ಅಪ್‌ಲೋಡ್ ಮಾಡಲು ಈಗಾಗಲೇ ದಿನಾಂಕ:02.01.2023 ರಂದು ನಡೆದ ವಿಡಿಯೋ ಕಾನ್ಫರೆನ್ಸ್ ಮೂಲಕ ತಿಳಿಸಲಾಗಿರುತ್ತದೆ. ಅದರಂತೆ ಸದರಿ ಮಾಹಿತಿಯನ್ನು **ದಿನಾಂಕ:04.01.**2023 **ರ ಬೆಳಗ್ಗೆ 11:00 ಗಂಟೆಯೊಳಗೆ** ಕಡ್ಡಾಯವಾಗಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ. ಒಂದು ವೇಳೆ ನಿಗಧಿತ ಅವಧಿಯೊಳಗಾಗಿ ಅಪ್‌ಲೋಡ್ ಮಾಡದಿರುವ ಕಾಲೇಜಿನ ಪ್ರಾಂಶುಪಾಲರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

03|01|2023

**ಮುಖ್ಯ ಆಡಳಿತಾಧಿಕಾರಿಗಳು**
ಕಾಲೇಜು ಶಿಕ್ಷಣ ಇಲಾಖೆ

**ಇವರಿಗೆ,**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು. – ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
4. ಕಛೇರಿ ಪ್ರತಿ.

ನಮೂನೆ;

# ಸೇವಾ ಪ್ರಮಾಣ ಪತ್ರ

ಕಾಲೇಜಿನ ಹೆಸರು:______________________________

ಅತಿಥಿ ಉಪನ್ಯಾಸಕರ ಹೆಸರು:______________________

| Year | ODD Semester | | EVEN Semester | |
|---|---|---|---|---|
| | Month/s | Days | Month/s | Days |
| 2003-2004 | | | | |
| 2004-2005 | | | | |
| 2005-2006 | | | | |
| 2006-2007 | | | | |
| 2007-2008 | | | | |
| 2008-2009 | | | | |
| 2009-2010 | | | | |
| 2010-2011 | | | | |
| 2011-2012 | | | | |
| 2012-2013 | | | | |
| 2013-2014 | | | | |
| 2014-2015 | | | | |
| 2015-2016 | | | | |
| 2016-2017 | | | | |
| 2017-2018 | | | | |
| 2018-2019 | | | | |
| August 2019 to September 2020 | | | | |
| December 2020 to September 2021 | | | | |
| October 2021 to 8th December 2021 and 1st February 2022 to August 2022 | | | | |

ಮೇಲ್ಕಂಡ ಅತಿಥಿ ಉಪನ್ಯಾಸಕರು ಸ್ನಾತಕೋತ್ತರ ತರಗತಿಗಳನ್ನು ಬೋಧಿಸಿರುವರೇ? (ಹೌದು/ಇಲ್ಲ); ______

ವಿ.ಸೂ: ಅತಿಥಿ ಉಪನ್ಯಾಸಕರು ಕರ್ತವ್ಯ ನಿರ್ವಹಿಸಿದ ವರ್ಷಗಳಿಗೆ ಮಾತ್ರ ಸೇವಾ ವಿವರಗಳನ್ನು ನಮೂದಿಸುವುದು.

ಪ್ರಾಂಶುಪಾಲರ ಸಹಿ, ಮೊಹರಿನೊಂದಿಗೆ